**ದಿನಾಂಕ:19-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು:-ಪ್ರತಿವಾದಿಯ ಪರ ಶ್ರೀ. ಎಂ.ಆರ್.ಆರ್, ವಕೀಲರಿಂದ:-**

13. ದಿ.06-02-2009 ರಂದು ನಿಮಗೆ ದಾವಾಸ್ವತ್ತಿಗೆ ಸಂಬಂಧಿಸಿದಂತೆ ನೋಂದಾಯಿತ ಕ್ರಯಪತ್ರವನ್ನು ಮಾಡಿಸಿಕೊಳ್ಳಲು ಪಹಣಿ, ರೆವಿನ್ಯೂ ದಾಖಲೆಗಳು ಮತ್ತು ಸರ್ವೆ ನಕ್ಷೆಯಲ್ಲಿ ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಕ್ಷೆಯಲ್ಲಿ ತೊಂದರೆ ಇತ್ತು ಎನ್ನುತ್ತಾರೆ. ಅದೇ ದಿನದಂದು ನಾನು ಉಪನೋಂದಣಾಧಿಕಾರಿಗಳ ಕಛೇರಿಗೆ ಹೋಗಿ ದಾವಾಸ್ವತ್ತಿಗೆ ಸಂಬಂಧಿಸಿದಂತೆ ನೋಂದಾಯಿತ ಕ್ರಯಪತ್ರ ಮಾಡಿಸಿಕೊಳ್ಳಲು ಸರ್ವೆ ನಕ್ಷೆಯ ಅವಶ್ಯಕತೆ ಇದೆಯಾ ಎಂಬ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. 2009 ರಿಂದ ಈ ದಾವೆಯನ್ನು ಸಲ್ಲಿಸುವ ತನಕ ನನ್ನ ಬಳಿ ಉಳಿಕೆ ಹಣವನ್ನು ರೂ. 30 ಸಾವಿರ ಇದೆ ಮತ್ತು ನಿಪಿ-1 ರಂತೆ ನೋಂದಾಯಿತ ಕ್ರಯಪತ್ರವನ್ನು ಮಾಡಿಕೊಡುವಂತೆ ಕೇಳಿ ನಾನು ಪ್ರತಿವಾದಿಗೆ ಕಾನೂನು ಬದ್ಧವಾಗಿ ಯಾವುದೇ ನೋಟಿಸ್ ನ್ನು ಕಳುಹಿಸಿರುವುದಿಲ್ಲ, ಆದರೆ ಮೌಖಿಕವಾಗಿ ಕೇಳಿರುತ್ತೇವೆ. ನಾನು ಯಾವ ದಿನಾಂಕಗಳನಂದು ಪ್ರತಿವಾದಿಯ ಬಳಿ ಮೌಖಿಕವಾಗಿ ನಿಪಿ-1 ಕ್ಕೆ ಸಂಬಂಧಿಸಿದಂತೆ ನೋದಾಯಿತ ಕ್ರಯಪತ್ರವನ್ನು ಮಾಡಿಕೊಡುವಂತೆ ಕೇಳಿಕೊಂಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ.

14. ದಿ.16-10-2014 ರಂದು ನಾನು ನಿಪಿ-3 ರಂತೆ ಪ್ರತಿವಾದಿಗೆ ನೋಟಿಸ್ ನ್ನು ಕಳುಹಿಸಿರುತ್ತೇನೆ. ನಾನು ನಿಪಿ-3 ರಂತೆ ನೋಟಿಸ್ ನ್ನು ಕಳುಹಿಸಿದ ನಂತರ ಸದರಿ ನೋಟಿಸ್ ಏನಾಯಿತು ಎಂಬುವುದರ ಬಗ್ಗೆ ನನಗೆ ಗೊತ್ತಿಲ್ಲ. ನೀವು ಅಂಚೆ ಅಧಿಕಾರಿಗಳ ಜೊತೆ ಶಾಮೀಲಾಗಿ ನಿಪಿ-4 ರಂತೆ ಸುಳ್ಳು ಷರಾವನ್ನು

ಬರೆಸಿ, ಈ ದಾವೆಗಾಗಿ ನಿಪಿ-4 ನ್ನು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1 ರಲ್ಲಿ ಪ್ರತಿವಾದಿಗೆ ತೊಂದರೆ ಇರುವ ಕಾರಣ ದಾವಾಸ್ವತ್ತನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಹೇಳಿರುವುದಿಲ್ಲ. ನಿಪಿ-1 ರಲ್ಲಿ ಪ್ರತಿವಾದಿಯ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1 ರಲ್ಲಿ ಇರುವ ಶಾಂತಬಾಯಿ ಎಂಬ ಸಹಿಯನ್ನು ನೀವು , ಸಾಕ್ಷಿದಾರರು ಮತ್ತು ಬಿಕ್ಲಂದಾರರು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1 ಕ್ಕೆ ಪ್ರತಿವಾದಿಯ ಯಜಮಾನರು ಸಹಿಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪ್ರತಿವಾದಿ ಮತ್ತು ಅವರ ಯಜಮಾನರು ದಾವಾಸ್ವತ್ತನ್ನು ನಿಮಗೆ ಮಾರಾಟ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪ್ರತಿವಾದಿ ಮತ್ತು ಅವರ ಯಜಮಾನರು ದಾವಾಸ್ವತ್ತಿಗೆ ಸಂಬಂಧಿಸಿದಂತೆ ನಿಪಿ-1 ರಂತೆ ನಿಮಗೆ ಯಾವುದೇ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

15. ನಿಪಿ-1 ರಲ್ಲಿ ನಮೂದಿಸಿರುವ ಹಾಗೆ ನೀವು ಪ್ರತಿವಾದಿಗೆ ರೂ. 2, 70,000/-ಹಣವನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಮಾತುಕತೆ ಮಾಡುವ ಮೊದಲೇ ರೂ.2,70,000/- ಕ್ಕೆ ನಿಪಿ-1 ನ್ನು ಮಾಡಲಾಗುತ್ತದೆ ಎಂದು ಪ್ರತಿವಾದಿ ಮತ್ತು ಅವರ ಯಜಮಾನರು ತಿಳಿಸಿದ ಕಾರಣ ನಾನು ರೂ. 2, 70,000/- ಹಣವನ್ನು ತೆಗೆದುಕೊಂಡು ಹೋಗಿದ್ದೇನು. ನಿಪಿ-1 ನ್ನು ಮಾಡುವ ಮೊದಲು ಯಾವುದೇ ಮಾತುಕತೆ ಆಗದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪ್ರತಿವಾದಿಗೆ ಸೇರಿದ ದಾವಸ್ವತ್ತನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ನೀವು

ನಿಪಿ-1 ನ್ನು ಸೃಷ್ಟಿಸಿ ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರುವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**